

ಕನ್ನಡ, ಹಿಂದಿ, ತೆಲುಗು ಚಿತ್ರ ನಿರ್ದೇಶಕ
ಹಾಗೂ ನಿರ್ಮಾಪಕ ಬಿ.ವಿಜಯ್

**ವಿಜಯ್ ಅಲಿಯಾಸ್ ಬಿ. ವಿಜಯಾ ರೆಡ್ಡಿ ಅತ್ಯುತ್ತಮ ಕನ್ನಡ ಚಿತ್ರಗಳನ್ನು ರೂಪಿಸಿದ ನಿರ್ದೇಶಕರಲ್ಲೊಬ್ಬರು. 'ಗಂಧದ ಗುಡಿ', 'ಮಯೂರ', 'ಸನಾದಿ ಅಪ್ಪಣ್ಣ' ಚಿತ್ರಗಳು ವಿಜಯ್ ಅವರ ಸಾಧನೆ ಹಾಗೂ ಪ್ರತಿಭೆಯ ರೂಪಕಗಳಂತಿವೆ. ವಿಜಯ್ ಅವರಿಗೀಗ 83 ವರ್ಷ. ಅನಾರೋಗ್ಯದಿಂದಾಗಿ ಮನೆಯ ಚೌಕಟ್ಟಿನಿಂದ ಹೆಚ್ಚು ಹೊರಗೆ ಬಾರದಿದ್ದರೂ, ಸಿನಿಮಾ ಮಾತು ಬಂದರೆ ಅವರ ಕಂಗಳಲ್ಲಿ ಹೊಳಪು ಕಾಣಿಸಿಕೊಳ್ಳುತ್ತದೆ, ಮಾತುಗಳಲ್ಲಿ ಬಿಸುಪು ವ್ಯಕ್ತವಾಗುತ್ತದೆ. ವಿಜಯ್ ಅವರೊಂದಿಗಿನ ಈ ಸಂದರ್ಶನ ಎಂಟೂವರೆ ದಶಕಗಳ ಕನ್ನಡ ಚಿತ್ರರಂಗದ ಒಂದು ವಿಶಿಷ್ಟ ಅಧ್ಯಾಯದ ನಿರೂಪಣೆಯೂ ಹೌದು.**



ಬಿ.ವಿಜಯ್ ಅವರ ಜೊತೆ ನಟ ಅನಿಲ್ ಕಪೂರ್

ಹೊರಬೀಳಬೇಕಾಯಿತು. ಅಂದಿನಿಂದಲೂ ಅವರ ದಿನಚರಿ ಹಾಸಿಗೆಯಲ್ಲಿಯೇ. ಮಾತು ಕೂಡ ತೊದಲು; ಅಸ್ಪಷ್ಟ. ಜೀವಿತದ ಕೊನೆಗಾಲದಲ್ಲಿ ವಿಜಯ್ ಮತ್ತೊಮ್ಮೆ ಮಗುವಾಗಿದ್ದಾರೆ. ಮಗ–ಸೊಸೆ ವಿಜಯ್ ಅವರನ್ನು ಅಕ್ಷರಶಃ ಮಗುವಿನಂತೆ ನೋಡಿಕೊಳ್ಳುತ್ತಿದ್ದಾರೆ. ಇಂಥ ಸ್ಥಿತಿಯಲ್ಲೂ ಸಿನಿಮಾ ಕುರಿತ ಮಾತು ಎಂದ ತಕ್ಷಣ ಅವರ ಕಣ್ಣು ಅರಳುತ್ತದೆ. ಸಹಾಯಕನ ನೆರವಿನಿಂದ ಎದ್ದು ಕೂತು ಸಡಗರದಿಂದಲೇ ನಮ್ಮೊಂದಿಗೆ ಮಾತಿಗಿಳಿದರು ವಿಜಯ್; ಆಂಧ್ರದ ಗೋದಾವರಿ ಸೀಮೆಯಿಂದ ಕರ್ನಾಟಕದ ಕಾವೇರಿ ಸೀಮೆಗೆ ಬಂದ ತಾನು ಹೇಗೆ ಕನ್ನಡದ ಶ್ರೇಷ್ಠ ಚಿತ್ರಗಳ ಭಾಗವಾದೆ, ಹೇಗೆ ಶ್ರೇಷ್ಠ ವ್ಯಕ್ತಿತ್ವಗಳ ಜೊತೆ ಒಡನಾಡಿದೆ ಎನ್ನುವ ನೆನಪಿನ ಬುತ್ತಿಯನ್ನು ಬಿಚ್ಚಿದರು.

ವಿಜಯಾ ರೆಡ್ಡಿ ಹುಟ್ಟಿದ್ದು 1936ರ ಜುಲೈ ಏಳರಂದು; ಊರು, ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ತಾಡೇಪಲ್ಲಿ ಗೂಡೇಂ. ಇವರ ತಂದೆ ಬಾಪಿರೆಡ್ಡಿ, ತಾಯಿ ಚಿಟ್ಟೆಮ್ಮ ರೈತರು; ಹೈಸ್ಕೂಲ್‌ವರೆಗೆ ಊರಿನಲ್ಲಿಯೇ ವಿದ್ಯಾಭ್ಯಾಸ. ಹೈಸ್ಕೂಲ್‌ನಲ್ಲಿದ್ದಾಗ ನಾಟಕಗಳಲ್ಲಿ ಪಾರ್ಟು ಮಾಡುವುದೆಂದರೆ ಇವರಿಗೆ ಎಲ್ಲಿಲ್ಲದ ಖುಷಿ. ಇದೇ ಇವರು ಮುಂದೆ ಸಿನಿಮಾರಂಗಕ್ಕೆ ಬರಲು ವೇದಿಕೆಯಾಗಿದ್ದು. ಗೋದಾವರಿ ಸೀಮೆಯ ಜನ ಆಗ ಉದ್ಯೋಗಕ್ಕಾಗಿ ಅಂದಿನ ಮದ್ರಾಸ್‌ಗೆ ಹೋಗುವುದು ರೂಢಿ. ಅದರಂತೆ ವಿಜಯ್ ಕೆಲಸ ಅರಸಿ 1955ರಲ್ಲಿ ಮದ್ರಾಸ್‌ಗೆ ಹೋದರು. ಆಗ ಸಿನಿಮಾ ಸೇರುವ ಕಲ್ಪನೆಯೇ ಅವರಿಗಿರಲಿಲ್ಲ. ಕೆಲಸ ಸಿಗುವುದು ಕಷ್ಟವಾಗಿ, ಶಾಲೆಯಲ್ಲಿ ಮಾಡಿದ್ದ ನಾಟಕಗಳು ಸಹಾಯಕ್ಕೆ ಬಂದವು. ಪರಿಚಿತರೊಬ್ಬರು ಇವರನ್ನು ಚಿತ್ರ ನಿರ್ದೇಶಕ ಬಿ. ವಿಠಲಾಚಾರ್ಯರ ಬಳಿ ಸೇರಿಸಿದರು. ವಿಠಲಾಚಾರ್ಯರ 'ಮನೆ ತುಂಬಿದ ಹೆಣ್ಣು' ಚಿತ್ರಕ್ಕೆ ವಿಜಯ್ ಸಂಕಲನ ಸಹಾಯಕನಾಗಿ ಕೆಲಸ ಮಾಡಿದರು. ಕೆಲಸದಲ್ಲಿನ ಇವರ ಆಸಕ್ತಿ ಹಾಗೂ ಶ್ರದ್ಧೆ ನೋಡಿ ಮೆಚ್ಚಿದ ವಿಠಲಾಚಾರ್ಯರು ಸಹ ನಿರ್ದೇಶಕರಾಗಿ ಬಡ್ತಿ ನೀಡಿ ನಿರ್ದೇಶನ ವಿಭಾಗಕ್ಕೆ ಸೇರಿಸಿಕೊಂಡರು. ಆ ಸಮಯದಲ್ಲಿ ಸಿದ್ದಲಿಂಗಯ್ಯನವರೂ ವಿಠಲಾಚಾರ್ಯರ ಬಳಿ ಸಹ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದರು; ಇಬ್ಬರೂ ಆತ್ಮೀಯ ಸ್ನೇಹಿತರಾದರು. ಮುಂದೊಂದು ದಿನ ಸಿದ್ದಲಿಂಗಯ್ಯ ಅವರ ಪ್ರೇಮವಿವಾಹಕ್ಕೆ ವಿಜಯ್ ಅವರು ಸಾಕ್ಷಿಯಾಗಿ ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿಬಂದದ್ದನ್ನು ನಸುನಗುತ್ತಲೇ ನೆನಪಿಸಿಕೊಳ್ಳುತ್ತಾರೆ ವಿಜಯ್! ಮುಖ್ಯ ವಿಚಾರವೇನೆಂದರೆ, ವಿಠಲಾಚಾರ್ಯರ ಈ ಇಬ್ಬರು ಶಿಷ್ಯಂದಿರು ಜೊತೆಜೊತೆಯಲ್ಲಿಯೇ ಕನ್ನಡ ಚಿತ್ರರಂಗಕ್ಕೆ ಆಣಿಮುತ್ತಿನಂಥ ಚಿತ್ರಗಳನ್ನು ನೀಡಿದರು ಎಂಬುದು.

ವಿಜಯ್ ಅವರ ಸ್ವತಂತ್ರ ನಿರ್ದೇಶನದ ಮೊದಲ ಚಿತ್ರ 'ಶ್ರೀಮತಿ'. ತೆಲುಗಿನ ಆ ಚಿತ್ರದಲ್ಲಿ 'ಊರ್ವಶಿ' ಶಾರದಾ ಮೊದಲ ಬಾರಿಗೆ ಪ್ರಧಾನ ಪಾತ್ರ ಮಾಡಿದ್ದರು. ಆ ಸಿನಿಮಾ ಚೆನ್ನಾಗಿ ಓಡಲಿಲ್ಲ. ವಿಜಯ್ ಅವರಿಗೆ ನಿರ್ದೇಶಕರಾಗಿ ಯಶಸ್ಸು ತಂದುಕೊಟ್ಟ ಮೊದಲ ಚಿತ್ರ ಕನ್ನಡದ 'ರಂಗಮಹಲ್ ರಹಸ್ಯ'. 1970ರಲ್ಲಿ ತೆರೆಕಂಡ ಈ ಚಿತ್ರದ ಕಾಸ್ಟಿಂಗ್‌ನಲ್ಲಿ ಒಂದು ವಿಶೇಷತೆಯಿತ್ತು. ಶ್ರೀನಾಥ್, ಭಾರತಿ ಮುಖ್ಯಭೂಮಿಕೆಯಲ್ಲಿದ್ದ ಸಸ್ಪೆನ್ಸ್ ಥ್ರಿಲ್ಲರ್‌ನಲ್ಲಿ ಹಾಸ್ಯನಟ ನರಸಿಂಹರಾಜು ಅವರದ್ದು ಕೊಲೆಗಾರನ ಪಾತ್ರ. ಚಿತ್ರದ ಕೊನೆಯವರೆಗೂ ಅದು ಗೊತ್ತಾಗುವುದೇ ಇಲ್ಲ; ಸಂಚಲನ ಮೂಡಿಸಿದ್ದ ಚಿತ್ರ ಭಾರಿ ಯಶಸ್ಸು ಕಂಡಿತ್ತು. ಅದು ಕನ್ನಡದಲ್ಲಿ ವಿಜಯ್ ಅವರ ವಿಜಯಯಾತ್ರೆಗೆ ಮುನ್ನುಡಿ ಬರೆದಿತ್ತು. ಆ ಚಿತ್ರದ ನಂತರ ವಿಜಯ್ ನಿರ್ದೇಶಿಸಿದ್ದು 'ಮೊದಲ ರಾತ್ರಿ' ಎನ್ನುವ ಹಾಸ್ಯ ಪ್ರಧಾನ ಚಿತ್ರ. ಕನ್ನಡದಲ್ಲಿ ವಿಜಯ್ ನಿರ್ದೇಶಿಸಿದ ಮೂರನೇ ಚಿತ್ರ ದ್ವಾರಕೀಶ್–ಜ್ಯೋತಿಲಕ್ಷ್ಮಿ ಅಭಿನಯದ 'ಕೌಬಾಯ್ ಕುಳ್ಳ'. ರಾಜ್‌ಕುಮಾರ್ ಅವರ 'ಪ್ರತಿಧ್ವನಿ' ಬಿಟ್ಟರೆ ಕನ್ನಡದಲ್ಲಿ ಬಂದ ಮತ್ತೊಂದು ಕೌಬಾಯ್ ಚಿತ್ರ ಅದೊಂದೇ ಎಂದು ದ್ವಾರಕೀಶ್ ಹೆಮ್ಮೆಯಿಂದ ಹೇಳುತ್ತಾರೆ.